# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)

# ಕರ್ನಾಟಕ

**ಮಾನ್ಯ ಮಾಧ್ಯಮ ಪ್ರತಿನಿಧಿಗಳೆ,**

ಹೋರಾಟದ ಶುಭಾಶಯಗಳು. ಗುಲ್ಬರ್ಗದಲ್ಲಿ ಪೌರ ಕಾರ್ಮಿಕರು ತಾವು ಮಾಡಿದ ಕೆಲಸದ ಸಂಬಳಕ್ಕಾಗಿ ಬೀದಿಗಿಳಿಯುವಂತೆ ಮಾಡಿ ನಂತರ ಸಂಬಳ ನೀಡದೆ ಅವರ ಮೇಲೆ ಅಕ್ರಮಗಳನ್ನು ಎಸಗುತ್ತಿರುವ ರಾಜ್ಯದ ಬಿ. ಜೆ. ಪಿ. ಸರ್ಕಾರದ ಫ್ಯಾಸಿಸ್ಟ್ ದುಷ್ಟತನಗಳನ್ನು ಖಂಡಿಸಿ ನಮ್ಮ ಹೇಳಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದನ್ನು ಪರಿಗಣಿಸಿ ಪ್ರಕಟಿಸಬೇಕೆಂದು ಈ ಮೂಲಕ ಕೋರುತ್ತಿದ್ದೇವೆ.

ಹೋರಾಟದಲ್ಲಿ ತಮ್ಮೊಂದಿಗೆ,

**ಗಂಗಾಧರ**

೧೩-೦೫-೨೦೧೦ ಸಿ.ಪಿ.ಐ. (ಮಾವೋವಾದಿ)

ಕರ್ನಾಟಕ

---

ಗುಲ್ಬರ್ಗದಲ್ಲಿ ತಾವು ಮೈಮುರಿದು ದುಡಿದ ಕೆಲಸದ ಸಂಬಳಕ್ಕಾಗಿ ಪೌರ ಕಾರ್ಮಿಕರು ಕಾದು, ಕೇಳಿ, ಬೇಸತ್ತು ಬೀದಿಗಿಳಿಯುವಂತೆ ಮಾಡಿದೆ ಬಿ.ಜೆ.ಪಿ. ಸರ್ಕಾರ. ಅಷ್ಟೇ ಅಲ್ಲದೆ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ತನ್ನ ಖಾಕಿ ಗೂಂಡಾ ಪಡೆಗಳನ್ನು ಛೂ ಬಿಟ್ಟು ಮನಬಂದಂತೆ ಲಾಠಿಯಿಂದ ಹೊಡೆದು ರಕ್ತ ಹರಿಸಿದೆ. ಅದೂ ಸಾಲದೆಂಬಂತೆ ಅಕ್ರಮವಾಗಿ ಅವರನ್ನು ಬಂಧಿಸಿ ಸುಳ್ಳು ಕೇಸು ಹಾಕಿ ಜೈಲಿಗೆ ತಳ್ಳಿದೆ. ಉಪವಾಸ ಸತ್ಯಾಗ್ರಹ ಕುಳಿತು ಪೌರಕಾರ್ಮಿಕರ ನ್ಯಾಯಯುತ ಹಕ್ಕೊತ್ತಾಯಗಳನ್ನು ಬೆಂಬಲಿಸಿದ ಹೋರಾಟಗಾರ ಎಸ್.ಕೆ. ಕಾಂತರನ್ನು ಬಂಧಿಸಿ ಜೈಲಿಗೆ ಹಾಕಲಾಗಿದೆ. ಇಷ್ಟೆಲ್ಲವನ್ನು ಅಚ್ಚುಕಟ್ಟಾಗಿ ಮಾಡಿರುವ ಸರ್ಕಾರ ದುಡಿದ ಕಾರ್ಮಿಕರಿಗೆ ಸಂಬಳ ವಿತರಿಸುವ ಮಾತನ್ನೇ ಆಡಿಲ್ಲದಿರುವುದನ್ನು ನೋಡಿದರೆ ಸರ್ಕಾರದ ಫ್ಯಾಸಿಸ್ಟ್‌ತನದ ಆಳ ಅರ್ಥವಾಗುತ್ತದೆ. ಇಂದಿನ ವಿಪರೀತ ಬೆಲೆ ಏರಿಕೆಯ ಪರಿಸ್ಥಿತಿಯಲ್ಲಿ ಮಾಡಿದ ಚಾಕರಿಗೆ ಸಂಬಳ ಕೊಡದೇ ಅದನ್ನು ಕೇಳಿದ್ದೇ ದೊಡ್ಡ ತಪ್ಪೆನ್ನುವಂತೆ ಸರ್ಕಾರ ವರ್ತಿಸಿದ್ದು ಕ್ರೂರ ಭೂಮಾಲಿಕ ಲಕ್ಷಣವಾಗಿದೆ. ಸರ್ಕಾರದ ಗೂಂಡಾಗಿರಿಯಾಗಿದೆ.

ನಾವು ಸರ್ಕಾರದ ಈ ದೌರ್ಜನ್ಯ, ಅಕ್ರಮಗಳನ್ನು ತೀವ್ರವಾಗಿ ಖಂಡಿಸುತ್ತಿದ್ದೇವೆ. ಪೌರ ಕಾರ್ಮಿಕರ ಹೋರಾಟವನ್ನು ನಾವು ಬೆಂಬಲಿಸುತ್ತೇವೆ.

- ***ಪೌರ ಕಾರ್ಮಿಕರ ಬಾಕಿ ವೇತನಗಳನ್ನು ಕೂಡಲೇ ಅವರಿಗೆ ವಿತರಿಸಬೇಕು.***
- ***ಅವರುಗಳ ಮೇಲೆ ಹಾಕಿರುವ ಎಲ್ಲಾ ಮೊಕದ್ದಮೆಗಳನ್ನು ವಾಪಾಸ್ ಪಡೆಯ ಬೇಕು.***

- *ಪೋಲಿಸರಿಂದ ದೌರ್ಜನ್ಯಕ್ಕೆ ಒಳಗಾದ ಕಾರ್ಮಿಕರಿಗೆ ವೈದ್ಯಕೀಯ ಪರಿಹಾರ ನೀಡಬೇಕು.*
- *ಪೌರ ಕಾರ್ಮಿಕರನ್ನು ಈ ರಿತಿ ಅನಾಗರಿಕವಾಗಿ ಸತಾಯಿಸಿದ್ದಕ್ಕಾಗಿ ಸರ್ಕಾರ ಅವರ ಕ್ಷಮೆ ಕೇಳಬೇಕು.*
- *ಪೌರ ಕಾರ್ಮಿಕರ ಮೇಲೆ ಲಾಠಿ ಪ್ರಹಾರ ಮಾಡಲು ಕಾರಣಕರ್ತರಾದ ಪೋಲೀಸ್ ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ಕ್ರಮ ಜರುಗಿಸಬೇಕು ಎಂದು ಈ ಮೂಲಕ ಸರ್ಕರವನ್ನು ಆಗ್ರಹಿಸುತ್ತಿದ್ದೇವೆ.*

ಗಂಗಾಧರ

೧೩-೦೫-೨೦೧೦

ಸಿ.ಪಿ.ಐ. (ಮಾವೋವಾದಿ)
ಕರ್ನಾಟಕ